ಕೋರಿಕೊಂಡಿದ್ದೀರಿ. ಇದರ ಬಗ್ಗೆ ಆದಷ್ಟು ಜಾಗ್ರತೆ ತನಿಖೆಯನ್ನು ಪೂರ್ಣಗೊಳಿಸಿ ಅಲ್ಲಿ ಬಿಸಿಲು ಅಥವಾ ಮಳೆಯಲ್ಲಿ ವಾಸ ಮಾಡತಕ್ಕಂತಹ ಜನರಿಗೆ ಆದಷ್ಟು ಜಾಗ್ರತೆ ಪೂರ್ಣ ನಿವೇಶನವನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆಂದು ತಮಗೆ ತಿಳಿಸುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ಖಂಡ್ರೆಯವರೆ, ತಮ್ಮದು ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಖಂಡ್ರೆ : ಫಲಾನುಭವಿಗಳ ಮನೆಗಳನ್ನು ಕೆಡವಿದ್ದಾರೆ. ಅವರೆಲ್ಲರೂ ಜೋಪಡಿಯಲ್ಲಿ ವಾಸ ಮಾಡುತ್ತಿದ್ದಾರೆ. ಆಗ ಮನೆ ಕೆಡುವಂತಹ ಪ್ರಶ್ನೆಯೇ ಇಲ್ಲ. ಇದ್ದಂತಹ ಜೋಪಡಿಯನ್ನು ತೆಗೆದು ಅವರು ಕುಳಿತಿದ್ದಾರೆ. ಮನೆಯಿದ್ದವರಿಗೆ ಮನೆ ಕೊಡುವ ಪ್ರಶ್ನೆ ಇಲ್ಲ. ಮನೆ ಇದ್ದವರಿಗೆ ಮನೆಯನ್ನು ಕೆಡವಿ ಮತ್ತೊಂದು ಮನೆಯನ್ನು ಕಟ್ಟುವ ಪ್ರಶ್ನೆ ಇಲ್ಲ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :–ಕರ್ನಾಟಕ ರಾಜ್ಯದಲ್ಲಿ ನಕಲಿ ಪೆಟ್ರೋಲ್ ಮಾರಾಟ ತಡೆಗಟ್ಟಲು ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನಕಲಿ ಪೆಟ್ರೋಲ್ ಹೇರಳವಾಗಿ ಮಾರಾಟವಾಗುತ್ತಿದೆ. ಇಡೀ ರಾಜ್ಯದ ವ್ಯಾಪ್ತಿಯಾಗಿ ನಕಲಿ ಪೆಟ್ರೋಲ್ ಚಲಾವಣೆಯಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹಳ್ಳಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲಿ ಈ ನಕಲಿ ಪೆಟ್ರೋಲ್ ನಡೆಯುತ್ತಿದೆ. ಒಂದು ಲೀಟರ್‌ಗೆ ಸುಮಾರು 30 ರೂಪಾಯಿಗಳಂತೆ ಮಾರುತ್ತಾರೆ. ಪೆಟ್ರೋಲ್‌ಗೆ ಕೆಮಿಕಲ್ಸ್ ಮಿಕ್ಸ್ ಮಾಡಿ ಮಾರುತ್ತಾರೆ. ಸುಮಾರು ದಿವಸಗಳಿಂದ ಈ ದಂಧೆಯು ಹೇರಳವಾಗಿ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದೆ, ಇವುಗಳೆಲ್ಲವೂ ಕಾನೂನು ಬಾಹಿರವೆಂದು ಹೇಳುತ್ತಿದೆ, ಈ ನಕಲಿ ಪೆಟ್ರೋಲ್‌ನ್ನು ಮಾರಾಟ ಮಾಡುತ್ತಿರುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ, ಎಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ, ಎಷ್ಟು ಜನರ ಮೇಲೆ ಕೇಸನ್ನು ಹಾಕಿದ್ದೀರಿ, ಯಾರ್ಯಾರನ್ನು ಜೈಲಿಗೆ ಹಾಕಿದ್ದೀರಿ? ನೀವೇ ಕಾನೂನು ಬಾಹಿರವೆಂದು ಹೇಳಿದ್ದೀರಿ, ಈ ರೀತಿಯಾಗಿ ನೆಡಯುತ್ತಿದೆ ಎಂಬುದು ಗೊತ್ತಿದೆ, ಇದರ ಬಗ್ಗೆ ತಾವು ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕಲ್ಲಾ, ತೆಗೆದುಕೊಂಡಿದ್ದೇವೆ ಎಂದಾದರೂ ಕೂಡ ಹೇಳಬೇಕಲ್ಲವೇ? ಉದಾ: ಮೊನ್ನೆ ರಾಷ್ಟ್ರೀಯ ಹೆದ್ದಾರಿ–7 ರಲ್ಲಿ 4 ಲಾರಿಗಳನ್ನು ಹಿಡಿದುಕೊಂಡಿದ್ದಾರೆ, ನೀವು ಏನು ಹೇಳಿದ್ದೀರಿ, ಎಲ್ಲಾ ದಾಖಲೆಗಳು ಸರಿಯಾಗಿದೆ, ಅದರಲ್ಲಿರುವುದು ಏನೆಂದರೆ, ಆ ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿರುವುದು ಆ ಥಿನ್ನರ್‌ಗೆ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಪೆಟ್ರೋಲ್‌ನ್ನಾಗಿ ಮಾಡಿ ಮಾರಾಟ ಮಾಡುತ್ತಿರುವುದು. ನೀವು ಆ ಲಾರಿಗಳಲ್ಲಿ ತೆಗೆದುಕೊಂಡು ಸಾಗಿಸುತ್ತಿರುವುದು ಕೊಯಮತ್ತೂರಿನ ಕಂಪನಿಗೆ ಎಂದು ಹೇಳಿದರೆ ನಾಲ್ಕು ಲಾರಿಗಳಲ್ಲಿ ಒಂದು ಲಾರಿ ಮಾತ್ರ ಕೊಯಮತ್ತೂರಿಗೆ ಹೋಗುತ್ತದೆ. ಉಳಿದ ಲಾರಿಗಳೆಲ್ಲಾ ಬೇರೆ ಬೇರೆ ಕಡೆಗಳಿಗೆ ಹೋಗಿ ಕೆಮಿಕಲ್ಸ್‌ನ್ನು ಮಾಡಿ ಪೆಟ್ರೋಲ್‌ನ್ನಾಗಿ ಪರಿವರ್ತಿಸಿ ಮಾಡುತ್ತಿದ್ದಾರೆ. ಇದು ನಡೆಯುತ್ತಿರುವ ಸಂಗತಿ. ಪ್ರತಿದಿನ ಹತ್ತಾರು ಲೋಡ್‌ಗಳಲ್ಲಿ ಥಿನ್ನರ್‌ಅನ್ನು ಅವರು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ? ಅದನ್ನು ಏತಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ? ಅದರಲ್ಲಿ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಪೆಟ್ರೋಲ್

ಮಾಡುತ್ತಾರೆ. ಮೊನ್ನೆ ನ್ಯಾಷನಲ್ ಹೈವೇ–7ರಲ್ಲಿ ಆ ಲಾರಿಯನ್ನು ಬಾಗೇಪಲ್ಲಿಯಲ್ಲಿ ಹಿಡಿದುಕೊಂಡಿದ್ದಾರೆ. ದಾಖಲೆಗಳು ಸರಿಯಾಗಿದೆ ಎಂದು ಬಿಟ್ಟುಬಿಟ್ಟಿದ್ದಾರೆ. ಇದರಲ್ಲಿ ಅರ್ಥವೇನಿದೆ? ಅದಕ್ಕೇ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಮಾರುತ್ತಿರುವುದು. ಅವರು ಪೆಟ್ರೋಲ್ ಮಾರಾಟ ಮಾಡುವುದಿಲ್ಲ. ಅವರು ಥಿನ್ನರ್ ಮಾರಾಟ ಮಾಡುತ್ತಾರೆ. ಅದರಲ್ಲಿ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಪೆಟ್ರೋಲ್ ಆಗಿ ಮಾರಾಟ ಮಾಡುತ್ತಾರೆ. ಈ ದಂಧೆಯು ಹೇರಳವಾಗಿ ನಡೆಯುತ್ತಿದೆ. ಇದು ಎಲ್ಲಾ ಕಡೆಗಳಲ್ಲೂ ಕೂಡ ಮಾರಾಟವಾಗುತ್ತಿದೆ. ಇದರಿಂದಾಗಿ ಒಂದು ಕಡೆ ಪಲ್ಯೂಷನ್‌ಗೆ ಇನ್ನೊಂದು ಕಡೆ ಆರೋಗ್ಯಕ್ಕೆ, ವೆಹಿಕಲ್ಸ್ ಸಂಪೂರ್ಣವಾಗಿ ಹಾಳಾಗುತ್ತದೆ. ಇದರಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತದೆ. ಅವರು ಒಂದು ಲೀಟರ್‌ಗೆ 30 ರೂಪಾಯಿಗಳಂತೆ ಮಾರಾಟ ಮಾಡುತ್ತಾರೆ. ಇದರ ಬಗ್ಗೆ ತಾವು ಯಾರ್ಯಾರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕು.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ನಕಲಿ ಪೆಟ್ರೋಲ್ ಮಾರಾಟವಾಗುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಹಾಗೂ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಈ ರಾಜ್ಯದಲ್ಲಿ ಈ ರೀತಿಯಾಗಿ ನಕಲಿ ಪೆಟ್ರೋಲ್ ಮಾಡುವಂತಹ ದಂಧೆ ಏನು ಇದೆ, ಇದು ಎಲ್ಲೆಲ್ಲಿ ಆ ರೀತಿಯಾಗಿ ನಡೆಯುತ್ತಿದೆ, ನನ್ನ ಗಮನಕ್ಕೆ ಏನು ಬರುತ್ತದೆ ಅವೆಲ್ಲವನ್ನೂ ನಾವು ಕಾನೂನು ರೀತಿಯಾಗಿ ಕ್ರಮ ತೆಗೆದುಕೊಂಡು ಅವರ ಮೇಲೆ ಕೇಸ್‌ಗಳನ್ನು ಬುಕ್ ಮಾಡುವಂತಹ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದೇವೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಈ ನಾಫ್ತಾ ಮತ್ತು ಥಿನ್ನರ್ ಏನು ಇದೆ, ಕೆರೊಸಿನ್ ಇವೆಲ್ಲವನ್ನೂ ಮಿಕ್ಸ್ ಮಾಡಿ ನಕಲಿ ಪೆಟ್ರೋಲ್ ರೀತಿಯಲ್ಲಿ ಇದನ್ನು ಮಾರಾಟ ಮಾಡತಕ್ಕಂತಹದ್ದು ವಿಶೇಷವಾಗಿ ಆಟೋಗಳು ಟ್ಯಾಕ್ಸಿಗಳು ಏನು ಇವೆ, ಇದು ಕಡಿಮೆ ಬೆಲೆಗೆ ಸಿಗುತ್ತದೆ ಎಂಬ ಉದ್ದೇಶದಿಂದ ಇದನ್ನು ಬಳಕೆ ಮಾಡುತ್ತಿದ್ದಾರೆ. ಇದರಿಂದಾಗಿ ಪರಿಸರವೂ ಕೂಡ ಹಾಳಾಗುತ್ತಿದೆ, ಅದರ ಜೊತೆಗೆ ವಾಹನಗಳೂ ಕೂಡ ಹಾಳಾಗುತ್ತಿದೆ. ಈ ಒಂದು ಕಾರಣಕ್ಕಾಗಿಯೇ ಕೇಂದ್ರ ಸರ್ಕಾರವೂ ಕೂಡ 5–6–2000ರಲ್ಲಿ ಕಒಂದು ನೋಟಿಫಿಕೇಷನ್‌ನ್ನು ಮಾಡಿ ಎಲ್ಲಾ ರಾಜ್ಯಗಳಲ್ಲಿ ಈ ರೀತಿಯಾಗಿ ನಡೆಯುತ್ತಿರುವ ನಕಲಿ ಮಾರಾಟವನ್ನು ಬಂದ್ ಮಾಡಬೇಕೆಂಬ ಆದೇಶವನ್ನು ನೀಡಿದ್ದಾರೆ. ನಮ್ಮಲ್ಲೂ ಕೂಡ ಕಳೆದ ವರ್ಷ ಸುಮಾರು 894 ಪೆಟ್ರೋಲ್ ಬಂಕ್‌ಗಳನ್ನು ತಪಾಸಣೆಯನ್ನು ಮಾಡಿದ್ದೇವೆ. ಅದರಲ್ಲಿ ಸ್ಯಾಂಪಲ್‌ಗಳನ್ನು ಡ್ರಾ ಮಾಡಿ ಅದನ್ನು ಟೆಸ್ಟ್ ಮಾಡಿಸಲಾಗಿ ಎಲ್ಲಿ ಪೆಟ್ರೋಲ್ ಬಂಕ್‌ಗಳಲ್ಲಿ ಕಲಬೆರಕೆ ಕಂಡುಬರುತ್ತದೆ ಅದರ ಮೇಲೆ ಕೇಸ್‌ಗಳನ್ನು ಬುಕ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ತಾವು ಏನು ನ್ಯಾಷನಲ್ ಹೈವೇ ಹಾಗೂ ಮುಂತಾದ ಕಡೆಗಳಲ್ಲಿ ಮಾರಾಟ ಮಾಡುತ್ತಾರೆಂದು ಹೇಳಿದ್ದೀರಿ, ಇಂತಹವುಗಳನ್ನು ತಡೆಗಟ್ಟುವ ದೃಷ್ಟಿಯಿಂದ ನಾವು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ನಮ್ಮ ಆಹಾರ ಇಲಾಖೆಯವರೆಲ್ಲರನ್ನೂ ಸೇರಿಸಿ ಒಂದು ಕಾರ್ಯಪಡೆಯನ್ನು ಆಯಾಯ ಜಿಲ್ಲಾ ಮಟ್ಟದಲ್ಲಿ ರಚನೆ ಮಾಡಿ ಅವರು ಪ್ರತಿತಿಂಗಳು ಇಂತಹ ಒಂದು ಧಾಳಿಗಳನ್ನು ನಡೆಸಿ ಈ ಒಂದು ರೀತಿಯಲ್ಲಿ ಕಲಬೆರಕೆ ವ್ಯಾಪಾರ ಏನು ನಡೆಯುತ್ತಿದೆ, ಅದನ್ನು ತಡೆಗಟ್ಟುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸರ್ಕಾರ ಈಗಾಗಲೇ ಅವರಿಗೆ ಸೂಚನೆಗಳನ್ನು ಎಲ್ಲಾ ಕಡೆಗಳಲ್ಲಿ ನೀಡಲಾಗಿದೆ. ಅದರಂತೆ ಈಗಾಗಲೇ ಸಾಕಷ್ಟು ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ತಾವು ಏನು ಬಾಗೆಪಲ್ಲಿಯಲ್ಲಿ 4 ಲಾರಿಗಳನ್ನು ಹಿಡಿದುಕೊಂಡು ದಾಖಲೆಗಳು ಸರಿಯಾಗಿದೆ ಎಂದು ಬಿಟ್ಟಿದ್ದಾರೆಂದು ತಿಳಿಸಿದ್ದೀರಿ. ಇಂಡಿಯನ್

ಆಯಿಲ್ ಟ್ಯಾಂಕರ್‌ನಲ್ಲಿ ಥಿನ್ನರ್ ಛತ್ತಿಸ್‌ಗಡ್‌ಗೆ ಹೋಗುತ್ತಿತ್ತು. ನಮ್ಮ ಇಲಾಖೆಯವರು ಆ 4 ಲಾರಿಗಳನ್ನು ತಪಾಸಣೆ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್‌ರವರು ದಾಖಲೆಗಳನ್ನು ವೆರಿಫೈ ಮಾಡಿ ಸದರಿ ವಾಹನಗಳನ್ನು ಪರಿಶೀಲನೆ ಮಾಡಿದ ನಂತರ ಅದನ್ನು ಕಳುಹಿಸಿಕೊಡಲಾಗಿದೆ. ಆದರೆ ಈ ಒಂದು ಕಲಬೆರಕೆ ಪೆಟ್ರೋಲ್ ಮಾರಾಟ ಮಾಡುವುದನ್ನು ತಡೆಗಟ್ಟಬೇಕು ಎನ್ನುವ ಕಾರಣಕ್ಕಾಗಿ ತಮ್ಮ ಕಳಕಳಿಯನ್ನು ಗಮನಿಸಿ ನಾವು ಒಂದು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಹೇಳತಕ್ಕಂಥದ್ದು ಸೀಮೆಎಣ್ಣೆ ಅಥವಾ ಡೀಸೆಲ್ ಸೇರಿಸಿ ಕೊಡುವ ಕಲಬೆರಕೆ ಪೆಟ್ರೋಲ್ ಅಲ್ಲ, ದಯವಿಟ್ಟು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೆಕು. ಕೆಲವೊಬ್ಬರು ಡೀಸೆಲ್ ಮಿಕ್ಸ್ ಮಾಡಿ : ಮಾರಾಟ ಮಡುತ್ತಾರೆ. ಅದು ಕಲಬೆರಕೆ ಪೆಟ್ರೋಲ್ ಇದು ಬೇರೆ ಪೆಟ್ರೋಲ್ ನಾನು ಹೇಳುವುದು. ಮಿಕ್ಸ್ ಮಾಡಿ ಮಾರಾಟ ಮಾಡುವ ತರಹ: ಈ ಪೆಟ್ರೋಲ್ ಮಾರಾಟ ಮಾಡುತ್ತಾರೆ. ತವು ಹೇಳುವಂತೆ ಕಲಬೆರಕೆ ಬೇರೆ ಅದು ಸೀಮೆಎಣ್ಣೆ ಮಿಕ್ಸ್ ಮಾಡಿ ಮಾರಾಟ ಮಾಡುವುದು. ಇದು ಅಲ್ಟರ್‌ನೇಟಿವ್; ಬೇರೆ ತರಹ ಇದು. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಮಿಕ್ಸ್ ಮಾಡಿ ಮಾರಾಟ ಮಾಡುತ್ತಾರಾ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಿಕ್ಸ್ ಮಾಡಿ ಮಾರಾಟ ಮಾಡುವುದು ಬೇರೆ. ಲೈಸೆನ್ಸ್ ತೆಗೆದುಕೊಂಡು ಅದರಲ್ಲಿ ಇಂತಹ ಪೆಟ್ರೋಲ್ ತೆಗೆದುಕೊಂಡು ತುಮಕೂರು ಇನ್ನಿತರ ಕಡೆ ಕಳುಹಿಸುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಇದು ಡೂಪ್ಲಿಕೇಟ್ ಪೆಟ್ರೋಲ್.

ಶ್ರೀ ಹೆಚ್. ಎಸ್. ಮಹದೇವ್ ಪ್ರಸಾದ್ : ಅದು ತಮಿಳುನಾಡು ಕಡೆಯಿಂದ ಬರುತ್ತದೆ. ಆದರೆ ಇವರು ಪೆಟ್ರೋಲ್ ಬಂಕ್‌ಗಳ ಮುಖಾಂತರ ಇಂತಹ ಪೆಟ್ರೋಲ್‌ಗಳನ್ನು ಮಾರಾಟ ಮಾಡುವುದಿಲ್ಲ. ಕೆಲವೊಂದು ಕಡೆ ಪರ್‌ಪಸ್ ಆಗಿ ಮಾರಾಟ ಮಾಡುತ್ತಿದ್ದಾರೆ, ಅದು ಡೂಪ್ಲಿಕೇಟ್ ಪೆಟ್ರೋಲ್ ಎಂದು ನಮ್ಮ ಗಮನಕ್ಕೆ ಬಂದಿರುತ್ತದೆ. ಆದರೆ ಇದನ್ನೂ ಸಣ್ಣ ಸಣ್ಣ ಅಂಗಡಿಗಳಲ್ಲಿ ಮಾರಾಟ ಮಾಡುತ್ತಾರೆ. ಇಂತಹ ಅಂಗಡಿಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರೆ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಇದರ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆ ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸಿರುತ್ತೇವೆ, ನಾವು ಕಂಟ್ರೋಲ್ ಮಾಡುವ ಪ್ರಯತ್ನ ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ : ತಾವು ಕ್ರಮ ತೆಗೆದುಕೊಳ್ಳಬೇಕು, ಸೀರಿಯಸ್ಸಾಗಿ ಆಕ್ಷನ್ ಆಗಬೇಕು. ನೀವು ಕಂಟ್ರೋಲ್ ಮಾಡುತ್ತೇವೆಂದರೆ 20 ಲಕ್ಷ ಲೀಟರ್ ತಂದಾಗ 10 ಲಕ್ಷ ಲೀಟರ್ ಕಂಟ್ರೋಲ್ ಮಾಡಿ ಉಳಿದದ್ದು ಬಿಡುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇನ್‌ಕ್ಲೂಡಿಂಗ್ ತುಮಕೂರು, ಹಾಸನ್, ಚಿತ್ರದುರ್ಗ, ಶಿವಮೊಗ್ಗ ಇನ್ನಿತರ ಕಡೆ ಸರಬರಾಜು ಆಗುತ್ತಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸಾಮಾನ್ಯ ಜನರಿಗೆ ಇಂತಹ ಪೆಟ್ರೋಲ್ ಎಂದು ಹೇಗೆ ಗೊತ್ತಾಗುತ್ತದೆ?

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಇದು ಏನಾಗುತ್ತದೆಂದರೆ, ಕಡಿಮೆ ದರದಲ್ಲಿ ಇಂತಹ ಪೆಟ್ರೋಲ್ ಸಿಗುತ್ತದೆಂದು ತೆಗೆದುಕೊಂಡು ಮಾರಾಟ ಮಾಡುವ ದಂದೆಗೆ ಇಳಿಯುತ್ತಾರೆ. ಆದ್ದರಿಂದ ಜನ ಎಚ್ಚರಿಕೆಯಿಂದ ಈ ರೀತಿ ಮಾರಾಟ ಮಾಡುವುದರ ಬಗ್ಗೆ ತಿಳಿಸಿದರೆ ಮತ್ತು ಈ ರೀತಿ ಡೂಪ್ಲಿಕೇಟ್ ಪೆಟ್ರೋಲ್ ಇಂತಹ ಕಡೆ ಸಿಗುತ್ತದೆಂದು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ, ಎಲ್ಲೆಲ್ಲಿ ಮಾರಾಟ ಮಾಡುತ್ತಾರೆ ಅವರ ಮೇಲೆ ಕೂಡ ಕಾನೂನು ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಸದನವನ್ನು ಈಗ ಸೋಮವಾರ ಬೆಳಿಗ್ಗೆ 11 ಘಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ದಿನಾಂಕ: 21–7–2005 ರ ಸಾಯಂಕಾಲ 5 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 25–7–2005 ರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

ಅನುಬಂಧ – I

5097 (5625) ಶ್ರೀ ಆಂಜನೇಯ. ಹೆಚ್. (ಭರಮಸಾಗರ) :ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ದಾವಣಗೆರೆ ನಗರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಿರುವ ನಿವೇಶನ ಎಷ್ಟು ಮತ್ತು ಹಂಚಿಕೆ ಮಾಡಿರುವ ಮನೆಗಳು ಎಷ್ಟು?

ಆ) ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನೀಡಬೇಕಾದ ಮೀಸಲಾತಿಯನ್ವಯ ಹಂಚಿಕೆಯಾಗಿದೆಯೇ?

ಇ) ಹಾಗಿದ್ದಲ್ಲಿ ಯಾವ ಯಾವ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಹಂಚಲಾಗಿದೆ? (ಹೆಸರು, ವಿಳಾಸ, ಜಾತಿಗಳ ವಿವರವಾದ ಪಟ್ಟಿ ಒದಗಿಸುವುದು)

ಈ) ಹಂಚಿಕೆಯಲ್ಲಿ ಭಾರಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಅಂಜನಮೂರ್ತಿ (ಮಾನ್ಯ ವಸತಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ದಾವಣಗೆರೆ ನಗರಕ್ಕೆ ಈ ಕೆಳಕಂಡಂತೆ ಮನೆಗಳನ್ನು ಮತ್ತು ನಿವೇಶನಗಳನ್ನು ನೀಡಲಾಗಿದೆ.

ನಗರ ಆಶ್ರಯ :–

ವರ್ಷ	ಗುರಿ	ಪೂರ್ಣಗೊಂಡ ಮನೆಗಳು
2002–03	113	1481
2003–04	0	602
2004–05	0	188
ಒಟ್ಟು	**113**	**2271**